and bull-dozer and they must know erection and dismantlingl Even at times, they have to know to get them repaired if they go wrong.

ಶ್ರೀ ಎಂ. ಎಸ್. ಕೃಷ್ಣನ್. . ಸರ್ಕಾರದವರು ಟ್ರಾಕ್ಟರು ಹಾಗೂ ಬುಲ್‌ಡೋಜರುಗಳ ತರಬೇತಿ ಪಡೆಯಲು ಕಳುಹಿಸಿ ಅವರು ವಾಪಸು ಬಂದ ಮೇಲೆ ಅವರಿಗೆ ಕೊಟ್ಟಿರುವ ತರಬೇತಿ ಸಾಕಾದಷ್ಟು ಆಗಿದೆಯೇ ಎನ್ನುವುದನ್ನು ತಾವು ವರದಿ ತರಿಸಿಕೊಂಡು ಖಚಿತಪಡಿಸಿಕೊಂಡಿದ್ದೀರಾ ? ಇವರು ಸರಿಯಾಗಿ ಕೆಲಸ ಮಾಡುತ್ತಾರೆಯೇ ಎನ್ನುವುದು ಗೊತ್ತಾಗಿದೆಯೇ ? ಮತ್ತು ಸರ್ಕಾರಕ್ಕೆ ಇದರ ತರಬೇತಿಗಾಗಿ ಎಷ್ಟು ಖರ್ಚು ಬಿದ್ದಿದ್ದೇ?.

ಶ್ರೀ ಬಿ. ರಾಚಯ್ಯ.—ಸಾಕಷ್ಟು ಟ್ರೇನಿಂಗ್ ಕೊಟ್ಟಿದ್ದಾರೆ ಮತ್ತು ನಮಗೆ ಬಂದಿರುವ ವರದಿ ಪ್ರಕಾರ ಇವರುಗಳು ಮೆಷಿನ್‌ಗಳನ್ನು ಹಾಗೂ ಬಿಡಿ ಭಾಗಗಳನ್ನು ರಿಪೇರಿ ಮಾಡುವುದರಲ್ಲಿ ಸಾಕಷ್ಟು ಅರಿವು ಸಂಪಾದನೆ ಮಾಡಿದ್ದಾರೆನ್ನುವುದು ಗೊತ್ತಾಗಿದೆ. ಇದರಿಂದ ಸರ್ಕಾರಕ್ಕೆ ಸುಮಾರು ೨೭,೪೦೦ ರೂಪಾಯಿಗಳವರೆಗೆ ಆಗಿದೆ.

ಶ್ರೀ ವಿ. ಎಸ್. ಪಾಟೀಲ್.—ಈಗಾಗಲೇ ನಾಲ್ಕು ಜನರನ್ನು ತರಬೇತಿ ಮಾಡಿಸಿ ಸರ್ಕಾರದವರು ಬರಮಾಡಿದ್ದಾರೆ. ಇನ್ನೂ ಎಂಟು ಜನರನ್ನು ಮತ್ತೆ ತರಬೇತಿಗೆ ಕಳುಹಿಸಬೇಕೆಂದು ಹೇಳಿದರು. ಇದಕ್ಕೆ ಬದಲು ಈಗ ತರಬೇತಿ ಪಡೆದು ಬಂದಿರುವವರ ಮೂಲಕ ಕ್ಲಾಸುಗಳನ್ನು ತೆರೆದು ಅವರ ಮೂಲಕ ಇಲ್ಲೇ ಇತರರಿಗೆ ಟ್ರೇನಿಂಗು ಕೊಡುವ ವ್ಯವಸ್ಥೆ ಏಕೆ ಮಾಡಬಾರದು ?

ಶ್ರೀ ಬಿ. ರಾಚಯ್ಯ.—ಇಲ್ಲಿ ಸಾಕಷ್ಟು ವರ್ಕ್‌ಷಾಪ್ ಫೆಸಿಲೀಟೀಸ್‌ಗಳು ಇಲ್ಲ ಮತ್ತು ಇದರಲ್ಲಿ ಬರೀ ಇಂಜನೀಯರುಗಳನ್ನು ಮಾತ್ರ ತರಬೇತಿಗಾಗಿ ಕಳುಹಿಸಲಾಗುತ್ತಿದೆ. ಇಲ್ಲಿರುವ ಟೆಕ್ನಿಷಿಯನ್‌ಗಳು ಹಾಗೂ ಆಪರೇಟರುಗಳಿಗೆ ರಷ್ಯಾದಿಂದ ಬಂದಿರುವ ಕೆಲವು ಜನ ಟೆಕ್ನಿಷಿಯನ್‌ಗಳಿಂದಲೇ ಟ್ರೇನಿಂಗು ನಡೆಯುತ್ತಿದ್ದಾರೆ. ರಷ್ಯಾದಿಂದ ಬಂದಿರುವ ಮೂರು ಜನ ಟೆಕ್ನಿಷಿಯನ್‌ಗಳು ಈಗಾಗಲೇ ಸುಮಾರು ಒಂದೂವರೆ ವರ್ಷದಿಂದ ಹತ್ತು ಜನರಿಗೆ ತರಬೇತಿ ಕೊಟ್ಟಿದ್ದಾರೆ.

ಶ್ರೀ ಬಿ. ದೊಡ್ಡಬೋರೇಗೌಡ.—ಆಡಿಟ್ ರಿಪೋರ್ಟಿನಲ್ಲಿ ಕೆಲವು ಕಡೆ ರಾಜ್ಯದಲ್ಲಿ ಇರುವ ಬುಲ್‌ಡೋಜರುಗಳು ಹಾಗೂ ಟ್ರಾಕ್ಟರುಗಳು ಕೆಟ್ಟು ಹೋಗಿ ಹಾಳಾಗುತ್ತಿವೆ ಎಂದು ತಿಳಿದು ಬಂದಿದೆ. ಇದರ ಸ್ಪೇರ್ ಪಾರ್ಟುಗಳನ್ನು ಇಲ್ಲೇ ಟ್ರೈನಿಂಗು ಪಡೆದಿರುವ ಆಪರೇಟರುಗಳ ಮೂಲಕ ಮಾಡಿಸಲು ಆಗುವುದಿಲ್ಲವೇ ?

ಅಧ್ಯಕ್ಷರು :—ತಾವು ಕೇಳುವ ಉಪ-ಪ್ರಶ್ನೆ ಇದಕ್ಕೆ ಸಂಬಂಧವಿಲ್ಲದಿರುವುದರಿಂದ ಅದನ್ನು ಆಲೋಚನೆ ಮಾಡಲಾಗುವುದಿಲ್ಲ.

GRANT OF LANDS BELONGING TO FISHERIES DEPARTMENT IN KODAVURU VILLAGE OF UDIPI TALUK

371 SRI B. BHASKER SHETTY (Kaup).—

Will the Minister of State for Fisheries and Ports be pleased to state :—

(*a*) the persons to whom and the purpose for which the lands belonging to Fisheries Department have been granted under darkhast or lease after the year 1966 in Kodavuru village of Udipi taluk and the extent of land so granted ;

(*b*) if the land is not granted, whether any persons have unauthorisedly occupied the lands belongining to fisheries department;

(*c*) the tenancy of drakhast fee the Government has received in return in respect of these lands ;

(*d*) whether the said lands have been utilised for the purpose for which they were granted ?

SRI H. LINGA REDDY (Minister of State for Fisheries and Ports):—

(*a*) After 1966, out of the land belonging to Fisheries Department 2 acres in Kodavur village of Udipi taluk was granted to Sri Madhwaraj for establishing fish powder and Oil Co., on lease basis.

(*b*) (i) Sri D. Panduranga Shenoy, Malpe and (ii) Sri M. Madhwaraj, Malpe have unauthorisedly acquired 40 and 52 cents respectively.

(*c*) Tenancy fee of Rs. 200 per annum is being realised from Sri M. Madhwaraj, Prop., Caronet Co.

(*d*) Yes,

ಶ್ರೀ ಬಿ. ಭಾಸ್ಕರಶೆಟ್ಟಿ:—ಉತ್ತರದಲ್ಲಿ ಮಧ್ವರಾಜ್‌ರವರು ಹಾಗೂ ಶ್ರೀ ಡಿ. ಪಾಂಡುರಂಗ ಶೆಣೈ ಇವರು ಅನಧಿಕೃತವಾಗಿ ಎನ್‌ಕ್ರೋಚು ಮಾಡಿದ್ದಾರೆ ಎಂದು ಹೇಳಿದ್ದೀರಿ ? ಹೀಗೆ ಎನ್‌ಕ್ರೋಚು ಮಾಡಿದವರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಹೆಚ್. ಸಿ. ಲಿಂಗಾರೆಡ್ಡಿ:—ಮೀನುಗಾರಿಕೆ ಯೋಜನೆ ಪ್ಲಾಂಟು ಇಲ್ಲಿ ಹಾಕುವುದಕ್ಕೆ ಮೊದಲು ಒಪ್ಪಿದ್ದವರು ಗತಿಸಿ ಹೋದುದರಿಂದ ಆದೇ ಷರತ್ತುಗಳ ಮೇಲೆ ಮೀನುಗಾರಿಕೆ ಯೋಜನೆ ಪ್ಲಾಂಟು ಇತ್ಯಾದಿಗಳನ್ನು ಇಲ್ಲಿ ಇಡಲು ಅವಕಾಶ ಶ್ರೀ ಮಧ್ವರಾಜ್ ಅವರಿಗೆ ಕೊಡಲಾಗಿದೆ. ಇದಲ್ಲದೆ ಇಲ್ಲಿ ಬೇರೆಯವರೂ ಮೆಷಿನರಿ ಇಡಬೇಕೆಂದು ಇಷ್ಟಿನ ಭೂಮಿಯನ್ನು ಹಿಂದೆಯೇ ಉಪಯೋಗಿಸುತ್ತಿದ್ದರು. ಆದರೆ ಶ್ರೀ ಪಾಂಡುರಂಗ ಶೆಣೈ ಎನ್ನುವವರು ಉಪಯೋಗಿಸುತ್ತಿರುವವರ ಜಮೀನು ರೆನೆನ್ಯೂಗೆ ಸಂಬಂಧ ಪಟ್ಟದ್ದು ಎಂದು ತಿಳಿದುದರಿಂದ ಈಗ ಇದನ್ನು ಡೆಪ್ಯುಟಿ ಕಮಿಷನರವರ ಕಡೆಗೆ ಕಳುಹಿಸಿ ಕೊಡಲಾಗಿದೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಶ್ರೀ ಮಧ್ವರಾಜ್‌ರವರೇ ಅಲ್ಲದೆ ಬೇರೆ ಯಾರಾದರೂ ಇಲ್ಲಿ ಫಿಷರೀಸ್ ಪ್ಲಾಂಟು ಇನ್ನಿತರ ಯೋಜನೆ ಮಾಡಬೇಕೆಂದು ರೆವೆನ್ಯೂ ಭೂಮಿ ಇಲ್ಲವೆ ಬೇರೆ ಭೂಮಿ ಕೊಡಬೇಕೆಂದು ಕೇಳಿದ್ದಾರೆಯೇ ? ಮತ್ತು ಇನ್ನೂ ಯಾರ್ಯಾರು ಈ ರೀತಿ ಜಮೀನು ಬೇಕು ಎಂದು ಕೇಳಿದ್ದಾರೆ ?

ಶ್ರೀ ಹೆಚ್. ಸಿ. ಲಿಂಗಾರೆಡ್ಡಿ.—ಶ್ರೀ ಕೆ. ಆರ್, ಬಂಗೇರ, ಎನ್ನುವವರು ಒಂದು ಎಕರೆ ಬೇಕು ಎಂದು ಕೇಳಿದ್ದಾರೆ. ಇವರಿಗೆ ಫಿಷರೀಸ್ ಸ್ಟೋರೇಜು ಮಾಡಲು ಭೂಮಿ ಕೊಡಲಾಗಿದೆ ಬೇರೆ ಕೆಲವರೂ ಜಮೀನಿಗಾಗಿ ಹಾಕಿದ್ದಾರೆ. ಇದನ್ನು ಇನ್ನೂ ಪರಿಶೀಲನೆ ಮಾಡುತ್ತಿದ್ದೇವೆ.

SRI H. SIDDAVEERAPPA.—Supplementary to (b) : May I know whether 40 is hectres or acres ?

SRI H. C. LINGA REDDY.—It is 'cents'. It is mentioned there as "40 and 52 cents. respectively."

SRI C. K. RAJAIAH SHETTY.—Supplementary to (a) : May I know the cost, whether you have given free of cost or whether you have fixed any price ?

SRI H. C. LINGA REDDY.—It is upset lease amount that has been fixed by the Deputy Commissioner, namely Rs. 200 per annum. It is not the cost of the land.

ಶ್ರೀ ಬಿ. ಭಾಸ್ಕರಶೆಟ್ಟಿ.—ವರ್ಷಕ್ಕೆ ೨೦೦ ರೂಪಾಯಿಗಳ ಪ್ರಕಾರ ಗೇಣಿಗೆ ಕೊಡಲಾಗಿದೆ ಎದು ಹೇಳಿದ್ದೀರಿ. ಎಷ್ಟು ವರ್ಷಕ್ಕೆ ಮತ್ತು ಯಾವ ಷರತ್ತಿನ ಮೇಲೆ ಕೊಟ್ಟಿದ್ದೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಮೊದಲು ಆಸ್ಪರೇಜ್ ಎಂಬುವವರಿಗೆ ೫೦ ವರ್ಷದ ಕಾಲದವರೆಗೆ ೨೦೦ ರೂಪಾಯಿಗಳ ಗೇಣಿಯ ಪ್ರಕಾರ ಸ್ಥಳವನ್ನು ಮಿನುಪುಡಿ ಮತ್ತು ಎಣ್ಣೆ ಕಂಪನಿ ಸ್ಥಾಪನೆಗೋಸ್ಕರ ವಾಗಿ ಕೊಡಲಾಗಿತ್ತು. ಅದೇ ಷರತ್ತಿನ ಮೇಲೆ ಇವರಿಗೂ ಕೊಡಲಾಗಿದೆ.

ARREARS OF MEDICAL CONTRIBUTION DUE FROM LOCAL BODIES

378. SHI C. K. RAJAIAH SHETTY (Chicknaikanahalli).—Will the Minister for Health be pleased to state:—

(*a*) the arrears of Medical Contribution due to Government by Local Bodies as on 1-4-1966,

(*b*) the demand, collection and balance in the years 1966-67, 1967-68 and 1968-69 ;

(*c*) the action taken by the Government for collection of arrears ?

SRI A. G. BASAVANNAPPA (Deputy Minister for Health).—

(*a*) Rs. 1,21,77,525-15.

(*b*)—

Year	*Demand*	*Collection*	*Balance*
	Rs.	Rs.	Rs.
1966-67	1,47,94,046-33	26,16,521-18	121,77,525-15
1967-68	2,10,77,838-47	21,01,462-54	1,89,76,375-93
1968-69	2,15,57,130-91	8,45,293-27	2,07,11,837-64

(*c*) Steps have been taken for recovery of Medical Contribution.

SRI C. K. RAJAIAH SHETTY —Supplementary to (c) : The total arears due according to the figures given are Rs. 518 lakhs and odd. when two years ago a question was asked the same figure was given in